ಚಿಲಕ ಹಾಕಿದ್ದಾರೆಯೇ ವಿನಾ ಊರಿನ ಯಾವ ಮನೆಗಳಿಗೂ ಬೀಗವನ್ನೇ ಹಾಕುವುದಿಲ್ಲವಂತೆ. ಯಾರಾದರೂ ಕಳ್ಳತನ ಮಾಡಿದರೆ ನಿರ್ದಾಕ್ಷಿಣ್ಯವಾಗಿ ಜನರನ್ನೆಲ್ಲ ಕೂಡಿಹಾಕಿ ಅವರೆಲ್ಲರ ಎದುರಿಗೆ ಎರಡೂ ಕೈಗಳನ್ನು ಕತ್ತರಿಸಿಬಿಡುವಂಥ ಶಿಕ್ಷೆ ವಿಧಿಸುತ್ತಿದ್ದನಂತೆ. ಕೈಗಳನ್ನೇ ಕತ್ತರಿಸಿದ ಮೇಲೆ ಮತ್ತೆ ಕಳ್ಳತನ ಮಾಡಲು ಹೇಗೆ ಸಾಧ್ಯ? ಆ ಭಯಕ್ಕೇ ಕೊಲೆ, ಸುಲಿಗೆ, ದರೋಡೆ ಮುಂತಾದ ಪದಗಳೇ ಆ ಸಾಮ್ರಾಜ್ಯದಲ್ಲಿ ಇಲ್ಲವಂತೆ.

ವಾರಕ್ಕೊಮ್ಮೆ ಹಂಪೆಯ ಬೀದಿಬೀದಿಗಳಲ್ಲಿ ಸಂತೆ ನಡೆಯುತ್ತದೆಯಂತೆ. ತರಕಾರಿ, ಉಪ್ಪು, ಬೆಲ್ಲ, ಅವಲಕ್ಕಿ, ಮಂಡಕ್ಕಿಗಳಂತೆ ಅಕ್ಕಿ, ರಾಗಿ, ಹೆಸರು, ತೊಗರಿ ಮುಂತಾದ ದವಸ ಧಾನ್ಯಗಳಿಂದ ಹಿಡಿದು, ಮಣ್ಣಿನ ಮಡಕೆ–ಕುಡಿಕೆಗಳವರೆಗೂ ಎಲ್ಲವೂ ಅಲ್ಲಿ ಸಿಗುತ್ತಂತೆ. ಅದೇ ರೀತಿ ಅಕ್ಕಸಾಲಿಗರೂ ಬಂದು ಬೀದಿಬದಿಯಲ್ಲಿ ಬೆಳ್ಳಿ ಬಂಗಾರದ ಒಡವೆಗಳನ್ನು ಇಟ್ಟುಕೊಂಡು ಮಾರುತ್ತಾರಂತೆ! ಕಳ್ಳರ, ಮೋಸಗಾರರ ಭಯವಿಲ್ಲದೇ ಬೀದಿಯಲ್ಲೇ ಮಾರುವುದನ್ನು ಕಂಡ ವಿದೇಶಿ ಯಾತ್ರಿಕರಿಗೆ ಇದು ಪರಮಾಶ್ಚರ್ಯವಾಗಿ ಕಂಡಿತಂತೆ. ಅಂದರೆ ಅವರವರ ದೇಶದಲ್ಲೆಲ್ಲ ಅಪಾರ ಪ್ರಮಾಣದ ಕಳ್ಳಕಾರರು, ಮೋಸಗಾರರಿದ್ದು, ಅವರಿಗೆಲ್ಲ ರಾಜತ್ವದ ಬಗ್ಗೆ ಎಗ್ಗೇ ಇಲ್ಲವೆಂದು ಕಾಣುತ್ತದೆ. ಅಂಥದರಲ್ಲಿ ನಮ್ಮ ಸಾಮ್ರಾಜ್ಯದ ಜನರ ಸತ್ಯ, ನಿಷ್ಠೆ, ಪ್ರಾಮಾಣಿಕತೆಯನ್ನು ಅವರೆಲ್ಲ ಹಾಡಿಹೊಗಳಿ ಪುಸ್ತಕಗಳಲ್ಲೂ ಬರೆದುಬಿಟ್ಟಿದ್ದಾರಂತೆ. ಇದನ್ನೆಲ್ಲ ಕೇಳಿದ ಮೇಲೆ ನಾನಿರುವ ಸಾಮ್ರಾಜ್ಯದ ಬಗ್ಗೆ, ನನ್ನ ನಾಡಿನ ರಾಜನ ಬಗ್ಗೆ ಅಪಾರ ಅಭಿಮಾನ ಉಕ್ಕಿಬಂದು ಆತನ ಬಗ್ಗೆ ಇನ್ನಷ್ಟು ಮತ್ತಷ್ಟು ತಿಳಿದುಕೊಳ್ಳಬೇಕೆಂಬ ಕುತೂಹಲವುಂಟಾಯಿತು.

ನನ್ನ ಅಡಿಯೇ ಅವರಿಬ್ಬರೂ ಕುಳಿತುಕೊಂಡು ಯಾವ ಯಾವ ಜಾತಿಯ, ಎಷ್ಟೆಷ್ಟು ವಯೋಮಾನದ ಮರಗಳು ಎಷ್ಟೆಷ್ಟು ಪ್ರಮಾಣದಲ್ಲಿ ಸುಟ್ಟುಹೋಗಿವೆ ಎಂಬುದನ್ನು ಎಷ್ಟು ನಿಖರವಾಗಿ ಬರೆದುಕೊಳ್ಳುತ್ತಿದ್ದರೆಂದರೆ, ಇನ್ನೊಬ್ಬರು ಯಾರಾದರೂ ಬಂದು ಪರಿಶೀಲಿಸಿದರೂ ಒಂದಿಂಚೂ ವ್ಯತ್ಯಾಸವಿರಬಾರದು, ಅಷ್ಟು ನಿಖರವಾಗಿ ಬರೆದುಕೊಳ್ಳುತ್ತಿದ್ದರು. ಆದರೆ ನನ್ನ ಭಾವಕೋಶವೂ ನನ್ನ ಸುತ್ತಮುತ್ತ ಸುಟ್ಟು ಹೋಗಿರುವ, ಅರೆಬೆಂದಿರುವ ಮರಗಳೆಷ್ಟೆಂದು ಗುರುತಿಸಲಾಗದಿರುವಾಗ ಆತ ಅಷ್ಟೊಂದನ್ನು ಅದು ಹೇಗೆ ನೆನಪಿಟ್ಟುಕೊಳ್ಳುತ್ತಾನೆಂದು ನನಗೆ ಆಶ್ಚರ್ಯವಾಗುತ್ತಿತ್ತು. ಈ ಲೆಕ್ಕದಿಂದ ಅಥವಾ ಈ ವರದಿಯಿಂದ ಆ ರಾಜನಿಗೇನು ಲಾಭ ಎಂದು ನನಗೆ ಅರ್ಥವಾಗುವಂತಿರಲಿಲ್ಲ. ಕಣ್ಣಿಗೆ ಕಾಣುವಷ್ಟು ದೂರದವರೆಗೂ ಬರೀ ಬೂದಿ ಬಣ್ಣವೇ ಚಾಚಿ ಹರಡಿಕೊಂಡಿತ್ತು. ಬಿಳಿ–ಕಂದು ಬಣ್ಣದ ಬೂದಿ ಗಾಳಿಗೆ ಆಕಾಶದೆತ್ತರಕ್ಕೆ ಅಡರುತ್ತಿತ್ತು. ರಾಜ ಏನಾದರೂ ಆ ಮೋಡಗಳಿಗೆ ಹೇಳಿ ಮಳೆ ಬರಿಸುತ್ತಾನೇನೋ ಎಂದುಕೊಂಡೆ. ನಿಸರ್ಗವೂ ಏನಾದರೂ ರಾಜನ ಅಧೀನಕ್ಕೇ ಬರುತ್ತದೆಯೋ ಎಂದು ಒಂದು ಕ್ಷಣ ಅನ್ನಿಸಿತು. ಆದರೆ ಇಂಥ ಪ್ರಾಮಾಣಿಕ ರಾಜರಿರುವುದರಿಂದಲೇ ಕಾಲಕಾಲಕ್ಕೆ ಮಳೆಬೆಳೆ ಆಗುತ್ತಿರುವುದು ಎಂದು ಅವರಾಡಿಕೊಳ್ಳುತ್ತಿದ್ದ ಮಾತು ನಿಜವೆನಿಸುತ್ತಿತ್ತು. ಹಾಗಿದ್ದರೆ ಈಗ ಮಳೆ ಬರಿಸಲಿ ನೋಡೋಣ, ಆ ರಾಜನ ಸಾಮರ್ಥ್ಯ ಏನೆಂದು ಗೊತ್ತಾಗುತ್ತದೆ ಎಂದು ಸವಾಲು ಹಾಕುವಂತೆ ಕೇಳಿಕೊಂಡೆ; ಈ ಬಿಸಿಲುಗಾಲದಲ್ಲಿ ಮಳೆ ಬರಲು ಸಾಧ್ಯವೇ ಇಲ್ಲ ಎಂಬ ಉಡಾಫೆಯಿಂದ!

ಅರೆ, ನನ್ನ ಮಾತು ಆ ಮೋಡಕ್ಕೂ ಹೇಗೆ ಕೇಳಿಸಿತೆಂದು ಆಶ್ಚರ್ಯ! ಮಳೆಯ ಹನಿಗಳು ನನ್ನವರೆಗೂ ತಲುಪಿದವು. ಆಹಾ... ಮೊದಲ ಮಳೆಯ ಆ ಆಲಿಂಗನವೇ... ಎಂಥ ಮಜ... ಅದರಲ್ಲೂ ಸುಟ್ಟುಹೋಗಿದ್ದ ನನ್ನ ಮೈಕೈಗಳಲ್ಲೆಲ್ಲ ಆ ತಂಪಿಗೆ ಜೀವ ಸ್ಫುರಿಸಿದಂತಾಯಿತು. ಇಂಥ ಬೇಸಿಗೆಯಲ್ಲಿ ಅದು ಹೇಗೆ ಮಳೆ ಬಂದಿತೆಂದು ಆಶ್ಚರ್ಯವಾದರೂ ಆ ಬೆಂಕಿಯಿಂದಾಗಿ ನೆಲದಿಂದ ಅಡರಿದ ಊದರಕ್ಕೆ ಇಡೀ ಭೂಮಂಡಲವೇ ಉಸಿರುಗಟ್ಟಿ ನಿಂತಿತ್ತು. ವಾತಾವರಣದಲ್ಲಿ ಉಂಟಾದ ಅತಿ ಉಷ್ಣದ ಬಿಸುಪಿಗೆ ಮೋಡಗಳು ದಟ್ಟೈಸಿ ಮಳೆ ಸುರಿಸಿದ್ದವು. ನಿಸರ್ಗ ಹೀಗೇ, ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುತ್ತದೆ. ಬಿಸಿಲು ಜಾಸ್ತಿಯಾದರೂ ತಂಪಾಗಿಸಲು ಮಳೆ ಸುರಿಸುತ್ತದೆ, ಕ್ರಿಮಿಕೀಟಗಳು ಜಾಸ್ತಿಯಾದರೆ ಅವುಗಳನ್ನು ನಿಯಂತ್ರಿಸಲು ಮತ್ತೊಂದು ಪಕ್ಷಿಯನ್ನು ಸೃಷ್ಟಿಸುತ್ತದೆ, ಹುಲ್ಲು ಎಲೆಬಳ್ಳಿಗಳನ್ನು ತಿಂದು ತೇಗುವ ಹುಲ್ಲೆಗಳು, ಮೊಲಗಳು ಜಾಸ್ತಿಯಾದರೆ ಕಾಡುಮೃಗಗಳು ಹುಟ್ಟಿಕೊಳ್ಳುತ್ತವೆ. ಆನೆಗಳು ಜಾಸ್ತಿಯಾದರೆ ಅವುಗಳನ್ನು ಹಿಡಿಯಲು ಮನುಷ್ಯರು ಬರುತ್ತಾರೆ... ಹೀಗೆ...

ಈ ಕಾಡಿನ ಬೆಂಕಿಗೆ ಲಕ್ಷಾಂತರ ಮರಗಳು ಭಸ್ಮವಾದುದಿರಲಿ, ಅಳಿದುಳಿದ ಪ್ರಾಣಿಗಳಿಗೆ ತಾವು ಬೇಟೆಗಾರರಿಂದ ತಪ್ಪಿಸಿಕೊಳ್ಳುವುದು ಅಪಾರ ಕಷ್ಟವಾಗಲಾರಂಭಿಸಿತು. ಅಷ್ಟು ದೂರದವರೆಗೂ ತೆರೆದ ಬಯಲಿನಲ್ಲಿ ಬೆನ್ನಟ್ಟಿ ಬರುವ ಕ್ರೂರ ಪ್ರಾಣಿಗಳಿಂದ ತಪ್ಪಿಸಿಕೊಂಡು ಅಡಗಿಕೊಳ್ಳಲು ಆಸರೆಯೇ ಇಲ್ಲದೇ ಬಲಿಯಾಗಲಾರಂಭಿಸಿದವು. ಹಾಗೆಯೇ ಬೇಟೆಯಾಡುವ ಪ್ರಾಣಿಗಳಿಗೂ ಇನ್ನೊಂದು ಸಮಸ್ಯೆ. ತಮ್ಮನ್ನು ದೂರದಿಂದಲೇ ಕಂಡು ಬೇಟೆಪ್ರಾಣಿಗಳು ಪರಾರಿಯಾಗಿ ಬಿಡುತ್ತಿದ್ದುದರಿಂದಾಗಿ ಅವಕ್ಕೂ ಆಹಾರದ ಸಮಸ್ಯೆ ಎದುರಾಗಲಾರಂಭಿಸಿತು.

ಮತ್ತೆ ನನ್ನ ಮನಸ್ಸು ರಾಜನ ಕಡೆಗೆ ಹರಿಯಿತು. ಈ ವಂಶವನ್ನು ಕಟ್ಟಿದ ಬುಕ್ಕರಾಜ ಮತ್ತು ನಂತರದ ರಾಜರು ಕೆರೆ ಕಟ್ಟೆಗಳನ್ನು ಕಟ್ಟಲು, ನೀರಾವರಿ ಕೃಷಿ ಮಾಡಲು ಅಪಾರ ಶ್ರಮಪಟ್ಟರಂತೆ. ಎಂದೇ ಬುಕ್ಕಾಂಬುಧಿ, ಬುಕ್ಕಸಾಗರ, ಬುಕ್ಕನಕೆರೆ ಮುಂತಾದ ನೀರಿನಾಶ್ರಯಗಳನ್ನು ಕಟ್ಟಿಸಿದರಂತೆ. ಎಲ್ಲಿ ಎರಡು ಬೆಟ್ಟಗಳು ಕಾಣುತ್ತಿದ್ದವೋ ಅವುಗಳ ಮಧ್ಯೆ ಒಂದು ಏರಿ ಹಾಕಿ ನೀರನ್ನು ನಿಲ್ಲಿಸಿಬಿಡುತ್ತಿದ್ದರಂತೆ. ನೇರ ಏರಿ ಹಾಕಿದರೆ ನೀರಿನ ಒತ್ತಡಕ್ಕೆ ಒಡೆದುಹೋಗುತ್ತದೆ ಎಂದು ಅಂಕುಡೊಂಕಾಗಿ ಕಟ್ಟೆ ಹಾಕಿಸುತ್ತಿದ್ದರಂತೆ. ಕಂಡಕಂಡಲ್ಲೆಲ್ಲ ಕೆರೆ, ಕುಂಟೆ, ಕಟ್ಟೆ, ಕೊಳ, ಕಂದಕ, ಕಾಲುವೆ, ಹೊಂಡ, ಪುಷ್ಕರಣಿ, ಬಾವಿಗಳನ್ನು ನಿರ್ಮಿಸಿ ವ್ಯರ್ಥವಾಗಿ ಹರಿದುಹೋಗುತ್ತಿದ್ದ ನೀರಿಗೆ ಲಗಾಮು ಹಾಕಿ ಬೇಸಾಯಕ್ಕೆ ಬಳಸಿಕೊಳ್ಳುತ್ತಿದ್ದರಂತೆ. ಅದಕ್ಕೆ ತಕ್ಕನಾಗಿ ಕಂದಾಯವನ್ನೂ ಹೇರುತ್ತಿದ್ದರಂತೆ. ತೋಟಾರಂಭ, ನೀರಾರಂಭ, ಕಾಡಾರಂಭ, ಕುಮರಿ ಎಂಬ ವಿಭಾಗಗಳನ್ನು ಮಾಡಿ ಅದಕ್ಕೆ ತಕ್ಕನಾಗಿ ರಾಜಧನವನ್ನು ವಿಧಿಸುತ್ತಿದ್ದರಂತೆ. ಆದರೆ ಕೃಷ್ಣದೇವರಾಯ ಪಟ್ಟಕ್ಕೆ ಏರುವವರೆಗೂ ವಿಜಯನಗರದ ಸಾಮ್ರಾಜ್ಯದ ಪರಿಸ್ಥಿತಿ ಅತಂತ್ರವಾಗಿತ್ತಂತೆ. ಕಳ್ಳಕಾಕರು ನಿರ್ಭಯವಾಗಿ ಓಡಾಡಿಕೊಂಡಿದ್ದರಂತೆ. ಸೋಮಾರಿಗಳು, ಜೂಜುಕೋರರಿಗೆ ಲಂಗುಲಗಾಮಿಲ್ಲದೇ ರಾಜ್ಯದ ಆದಾಯ ಕುಂಠಿತಗೊಂಡಿತ್ತಂತೆ. ಯಾವಾಗ ಕೃಷ್ಣದೇವರಾಯ ಪಟ್ಟಕ್ಕೇರಿದನೋ ಆಗ ಮೊಟ್ಟಮೊದಲು ಮಾಡಿದ್ದೆಂದರೆ ಕಂದಾಯವನ್ನು ಅಧಿಕಗೊಳಿಸಿದ್ದಂತೆ. ಆ ಕಂದಾಯವನ್ನು ಕಟ್ಟಲಾರದೇ ಕರ ತೆರಿಗೆಗಳು ಅಧಿಕವಾಯಿತು ಎಂದು ಗೊಣಗುಟ್ಟಿದರೂ, ಆಸ್ತಿ ಎಲ್ಲಿ ಕೈಬಿಟ್ಟುಹೋಗುವುದೋ ಎಂದು ಹೆದರಿ ಸೋಂಬೇರಿಗಳಾದವರೂ ಮೈಮುರಿದು ದುಡಿಯಲಾರಂಭಿಸಿದರಂತೆ.

ಆದಾಗ್ಯೂ ಮಾತು ಕೇಳದವರ ಬೀಳುಬಿದ್ದ ಜಮೀನುಗಳನ್ನು ಸಾಮ್ರಾಜ್ಯದ ವಶಕ್ಕೆ ಪಡೆದುಕೊಂಡು, ದುಡಿದು ಕಂದಾಯ ಕಟ್ಟಲು ಮುಂದೆ ಬರುವವರಿಗೆ ನೀಡುತ್ತಿದ್ದನಂತೆ. ಹೀಗಾಗಿ ಕಾಡಾರಂಭದ ಅರೆಕಾಡಿನ ಮರಗಳನ್ನು ಕಡಿಸಿ, ಬೇರುಗಳನ್ನು ಸುಡಿಸಿ ವ್ಯವಸಾಯ ಯೋಗ್ಯ ಮಾಡಿಸಿದನಂತೆ. ಹಾಗಂತ ಕಾಡನ್ನೇನೂ ನಾಶ ಮಾಡಲಿಲ್ಲ. ಆತನಿಗಿಂತ ಮೊದಲು ಬರಗಾಲದಿಂದ ತತ್ತರಿಸಿಹೋಗುತ್ತಿದ್ದ ಸಾಮ್ರಾಜ್ಯ ಈತನ ಆಳ್ವಿಕೆಯ ಕಾಲದಲ್ಲಿ ಸಮೃದ್ಧವಾಗಿ ಮಳೆ ಸುರಿಸುತ್ತಿತ್ತಂತೆ. ಕಾಡಿನಿಂದಲೇ ಮಳೆ ಬರುವುದು ಎಂದರಿತಿದ್ದ ಈತ ಕಾಡನ್ನೂ ಜೋಪಾನ ಮಾಡಿಸಿದನಂತೆ. ಹಾಗಾಗಿ ನಾನೂ ಈ ಕಾಲದಲ್ಲೇ ಹುಟ್ಟಿದ್ದರಿಂದ ಬಚಾವಾಗಿದ್ದೇನೆಂದು ಕಾಣುತ್ತದೆ. ಅದಕ್ಕೆಂದೇ ಬಹುಶಃ ಆತ ಕಾಡಿನ ಲೆಕ್ಕ ಬರೆದು ತರಲು ಈ ಜನರನ್ನು ಕಳಿಸಿರಬೇಕು.

ಈ ರಾಜನೇನೋ ಅತ್ಯಂತ ಪ್ರಾಮಾಣಿಕ, ಬಲಿಷ್ಠ ಎಂದು ಒಪ್ಪಿಕೊಳ್ಳೋಣ. ಆದರೆ ಮನುಷ್ಯನ ಜೀವಿತಾವಧಿಯೇ ಅತ್ಯಂತ ಕಡಿಮೆಯಲ್ಲವೇ? ಹೆಚ್ಚೆಂದರೆ ಎಂಭತ್ತುನೂರು ವರ್ಷ ಬದುಕಿರಬಹುದು. ಎಂಥ ಶಕ್ತಿಯುತ ರಾಜನಾದರೂ ಸಾಯಲೇಬೇಕಲ್ಲವೇ? ರಾಜ ತನಗಿರುವ ಅತ್ಯುನ್ನತ ಅಧಿಕಾರದಿಂದ ಅತ್ಯುತ್ತಮವಾದ ಆಹಾರ ಸೇವನೆ, ರಾಜವೈದ್ಯರ ಚಿಕಿತ್ಸೆ ಎಲ್ಲದರ ಪರಿಣಾಮವಾಗಿ ಒಂದಷ್ಟು ವರ್ಷ ಜಾಸ್ತಿಯೇ ಬದುಕುತ್ತಾನೆಂದಿಟ್ಟುಕೊಳ್ಳೋಣ. ಆದರೆ ಸಾಯದೆ ಉಳಿದಿರಲಂತೂ ಸಾಧ್ಯವಿಲ್ಲವಲ್ಲ? ಆಮೇಲೆ ಬರುವ ರಾಜ ಈತನಷ್ಟು ಸಮರ್ಥನಲ್ಲದಿದ್ದರೆ ಈ ರಾಜ್ಯದ ಗತಿಯೇನು ಎಂಬ ಆಲೋಚನೆಯೊಂದಿಗೆ ಆತಂಕವೂ ಮನದಲ್ಲಿ ಮೂಡಿ ಮಾಯವಾಯಿತು.